ಶ್ರೀ ಬಿ. ಸೋಮಶೇಖರ್:- ಎಕ್ಸಾಮಿನ್ ಅಲ್ಲ. It is very clear. Once new C & R rules came into effect that will replace the old rules. Old rules are not valid and there is no ambiguity. If appointments are made as per old rules, you have to clearly say it will be cancelled. Action should be taken against the officer.

Sri R. Roshan Baig:- Since, Now you have brought to my notice....

Sri B. Somashekar:- This is not the first time. Last time this subject was discussed at length and you expressed regret and assured the House that action will be taken. So far no action has been initiated. I want an assurance whether action will be taken?

Sri R. Roshan Baig:- If it has happened, legally we will examine and definitely taken action against the concerned officers.

ಶ್ರೀ ಬಿ. ಸೋಮಶೇಖರ್:- ಎಷ್ಟು ದಿನದೊಳಗೆ ಮಾಡುತ್ತೀರಿ?

Sri R. Roshan Baig:- At the earliest.

ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆಯ ದಾಸ್ತಾನು ಮತ್ತು ಮಾರಾಟ

203 (1400) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-03ನೇ ಸಾಲಿನಲ್ಲಿ ರಾಜ್ಯದಲ್ಲಿನ ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆಯ ಪ್ರಮಾಣ ಎಷ್ಟು? ಕಾರ್ಖಾನೆವಾರು ವಿವರ ನೀಡುವುದು?

ಆ) ಈ ಕಾರ್ಖಾನೆಗಳು ಎಷ್ಟು ಪ್ರಮಾಣದ ಸಕ್ಕರೆಯನ್ನು ಮಾರಾಟ ಮಾಡಿವೆ:ಉಳಿದ ದಾಸ್ತಾನು ಎಷ್ಟು?

ಇ) ಈ ಸಕ್ಕರೆ ಕಾರ್ಖಾನೆಗಳು ಸಕ್ಕರೆಯನ್ನು ಮಾರಾಟ ಮಾಡಲು ವಿಧಿಸಿರುವ ನಿಬಂಧನೆಗಳೇನು?

ಈ) ಈ ಸಕ್ಕರೆ ಕಾರ್ಖಾನೆಗಳು ಆರ್ಥಿಕ ಸಂಕಷ್ಟದಲ್ಲಿರುವುದು ನಿಜವೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) 2002-03ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ದಿನಾಂಕ 31-1-2003 ರವರೆಗೆ 10.05 ಲಕ್ಷ ಟನ್ ಸಕ್ಕರೆಯನ್ನು ಉತ್ಪಾದಿಸಿವೆ. ಕಾರ್ಖಾನೆಯ ವಿವರ ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಆ) ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರದಿಂದ ಸಕ್ಕರೆ ಬಿಡುಗಡೆಯ ಆದೇಶದನ್ವಯ ಸಕ್ಕರೆಯನ್ನು ಮಾರಾಟ ಮಾಡುತ್ತಿವೆ.

1. ಕಳೆದ ಹಂಗಾಮಿನ ಅಂತ್ಯಕ್ಕೆ (ದಿನಾಂಕ 30-9-2002) ಇದ್ದ ಸಕ್ಕರೆಯ ದಾಸ್ತಾನು 9.62 ಲಕ್ಷ ಟನ್
2. ಹಾಲಿ ಹಂಗಾಮಿನಲ್ಲಿ (ದಿನಾಂಕ 1-10-2002 ರಿಂದ 31-1-03 ರವರೆಗೆ) ಉತ್ಪಾದನೆಯಾದ ಸಕ್ಕರೆ 10.05 ಲಕ್ಷ ಟನ್
3. ಒಟ್ಟು ಲಭ್ಯವಾದ ಸಕ್ಕರೆಯ ಪ್ರಮಾಣ 19.67 ಲಕ್ಷ ಟನ್
4. ಒಟ್ಟು ಮಾರಾಟವಾದ ಸಕ್ಕರೆ 6.75 ಲಕ್ಷ ಟನ್
5. ದಿನಾಂಕ 31-1-2003ರಲ್ಲಿದ್ದಂತೆ ಸಕ್ಕರೆಯ ದಾಸ್ತಾನು 12.92 ಲಕ್ಷ ಟನ್

ಮೇಲ್ಕಂಡ ಅಂಕಿ ಅಂಶಗಳ ಪ್ರಕಾರ ಒಟ್ಟು 6.75 ಲಕ್ಷ ಟನ್ ಸಕ್ಕರೆ ದಿನಾಂಕ 1-10-02 ರಿಂದ 31-1-2003ರ ಅವಧಿಯಲ್ಲಿ ಮಾರಾಟ ಮಾಡಿರುತ್ತದೆ.

ಇ) ಕೇಂದ್ರ ಸರ್ಕಾರದ ಬಿಡುಗಡೆ ಆದೇಶದನ್ವಯ ಆಯಾ ಕಾರ್ಖಾನೆಗಳು ತಮ್ಮ ವ್ಯವಹಾರಿಕ ನಿರ್ಧಾರದ ಪ್ರಕಾರ ಟೆಂಡರ್ ಪ್ರಕಾರ ಮಾರಾಟ ಮಾಡಲು ಸ್ವತಂತ್ರರಿರುತ್ತಾರೆ.

ಈ) ನಿಜ..

ಅನುಬಂಧ

2002-2003ನೇ ಸಾಲಿನಲ್ಲಿ ನುರಿಸಿದ ಕಬ್ಬು ಉತ್ಪಾದಿಸಿದ ಸಕ್ಕರೆ ಮತ್ತು ಶೇಕಡಾವಾರು ಇಳುವರಿಯನ್ನು ತೋರಿಸುತ್ತ ತಃಖ್ತೆ (31-1-03 ರಂತೆ)

(1-10-2002 ರಿಂದ 30-9-2003) (ಮೆ. ಟನ್‌ಗಳಲ್ಲಿ)

ಕ್ರ. ಸಂ.	ಸಕ್ಕರೆ ಕಾರ್ಖಾನೆಯ ಹೆಸರು	ನುರಿಸಿದ ಕಬ್ಬು	ಉತ್ಪಾದಿಸಿದ ಸಕ್ಕರೆ	ಶೇಕಡಾವಾರು ಇಳುವರಿ
1	2	3	4	5
1.	ಭದ್ರಾ	195341	18329	9.53
2.	ಭಾಗ್ಯಲಕ್ಷ್ಮಿ	-	-	-
3.	ಬೀದರ್	276330	28088	10.28
4.	ದಕ್ಷಿಣ ಕನ್ನಡ	-	-	-
5.	ದೂದ್‌ಗಂಗಾ ಕೃಷ್ಣ ಸಸಕಾ	485870	51610	11.81
6.	ಘಟಪ್ರಭಾ	217750	24341	11.32
7.	ಹಾಲಸಿದ್ದನಾಥ	155855	18428	11.88
8.	ಹೇಮಾವತಿ	131504	11727	8.73
9.	ಹಿರಣ್ಯಕೇಶಿ	515830	58390	11.50
10.	ಕರ್ನಾಟಕ	93954	9300	10.09
11.	ಮಲಪ್ರಭಾ	379150	40576	10.57
12.	ನಂದಿ	244430	28186	11.54
13.	ಪಾಂಡವಪುರ	129025	11487	8.90

1	2	3	4	5
14.	ರಾಯಬಾಗ್	-	-	-
15.	ರೈತರ ಸಸಕಾ	284340	32858	11.49
16.	ಅಳಂದ್ ಸಹಕಾರ ಸಕ್ಕರೆ ಕಾರ್ಖಾನೆ	16850	1584	9.74
17.	ಶ್ರೀ ಶ್ರೀರಾಮ	156510	14710	9.46
18.	ವಾಣಿವಿಲಾಸ	-	-	-
19.	ಕೃಷ್ಣಾ	170300	18921	11.24
20.	ನಾರಂಜಾ	202036	20753	10.30
	ಒಟ್ಟು	3605075	389288	10.90
ಸಾರ್ವಜನಿಕ ವಲಯ:				
21.	ಎಂ.ಪಿ.ಎಂ. ಶುಗರ್ಸ್	300771	31829	10.37
22.	ಮೈಸೂರು ಶುಗರ್ ಕಂ.	464428	43574	9.27
	ಒಟ್ಟು	765199	75403	9.85
ಜಂಟಿ ವಲಯ:				
23.	ಗಂಗಾವತಿ	-	-	-
		-	-	-
ಖಾಸಗಿ ವಲಯ:				
24.	ಬನ್ನಾರಿ ಅಮ್ಮನ್ ಶುಗರ್ಸ್	588260	63195	10.85
25.	ಚಾಮುಂಡೇಶ್ವರಿ ಶುಗರ್ಸ್	417320	39982	9.53
26.	ದಾವಣಗೆರೆ ಶುಗರ್ಸ್	309021	31162	10.00
27.	ಗೋದಾವರಿ ಶುಗರ್ಸ್	795660	88573	11.20
28.	ಐ.ಎಸ್.ಆರ್.	87690	8780	10.37
29.	ಐ.ಸಿ.ಎಲ್.	302008	31197	10.33
30.	ಮಹದೇಶ್ವರ	-	-	-
31.	ಪ್ರಭುಲಿಂಗೇಶ್ವರ	344870	41254	12.17
32.	ರೇಣುಕಾ ಶುಗರ್ಸ್	356170	40323	11.32
33.	ಸಿರಗುಪ್ಪ ಶುಗರ್ಸ್ (ಗೌರಿಬಿದನೂರು)	-	-	-
34.	ಸಿರಗುಪ್ಪ ಶುಗರ್ಸ್ (ದೇಶನೂರು)	-	-	-
35.	ಸುಂದರಿ ಶುಗರ್ಸ್	-	-	-
36.	ಶ್ಯಾಮನೂರು ಶುಗರ್ಸ್	440570	43193	9.86
37.	ಉಗಾರ್ ಶುಗರ್ಸ್	757450	87465	11.57

1	2	3	4	5
38.	ಜಮಖಂಡಿ	166308	18374	11.44
39.	ಅಥಣಿ ಪಾರ್ಮರ್ಸ್	227165	26264	11.51
40.	ನಿರಾಣಿ	32850	3067	9.60
41.	ವೆಂಕಟೇಶ್ವರ	168490	18393	10.92
	ಒಟ್ಟು	**4993832**	**541232**	**10.84**
	ಒಟ್ಟು ಮೊತ್ತ	**9364106**	**1005923**	**10.74**

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಸಕ್ಕರೆ ಕಾರ್ಖಾನೆಗಳ ಬಗ್ಗೆ ಎಷ್ಟು ಉತ್ಪಾದನೆ ಇದೆ, ಎಷ್ಟು ಸ್ಟಾಕ್ ಇದೆ ಎಂದು ನಾನು ಪ್ರಶ್ನೆ ಕೇಳಿದ್ದಕ್ಕೆ ಅವರು ಅಂಕಿಸಂಖ್ಯೆಗಳ ಸಮೇತ ಉತ್ತರಿಸಿದ್ದಾರೆ. ನಾನು ಮುಖ್ಯವಾಗಿ ಒಂದು ಪ್ರಶ್ನೆ ಕೇಳುವುದೇನೆಂದರೆ, ರಾಜ್ಯದಲ್ಲಿರತಕ್ಕಂಥ ಒಟ್ಟಾರೆ ಷುಗರ ಫ್ಯಾಕ್ಟರಿ ಏನು ಇವೆ, ರೈತರಿಗೆ ಕೊಡತಕ್ಕಂಥ ಒಟ್ಟು ಬಾಕಿ 335 ಕೋಟಿ 20 ಲಕ್ಷ ರೂಪಾಯಿಗಳು ಇವೆ. ಹೀಗಾಗಿ ಅದನ್ನು ವಸೂಲು ಮಾಡಲಿಕ್ಕೆ, ಫ್ಯಾಕ್ಟರಿಯವರು ರೈತರಿಗೆ ಕೊಡಲಿಕ್ಕೆ ಸರ್ಕಾರದ ಮೇಲೆ ಏನು ಒತ್ತಡ ತಂದಿದ್ದಾರೆ ಮತ್ತು ಏನು ಕ್ರಮ ತೆಗೆದುಕೊಂಡಿದ್ದಾರೆ? ಏಕೆಂದರೆ, ಮಾನ್ಯ ಸಚಿವರು ಯಾವುದೋ ಸಮಾರಂಭದಲ್ಲಿ ಒಂದು ಪತ್ರಿಕಾ ಹೇಳಿಕೆ ಕೊಟ್ಟಿದ್ದರು. "15 ದಿವಸಗಳಲ್ಲಿ ಕಬ್ಬಿನ ಹಣ ಪಾವತಿ, ತಪ್ಪಿದಲ್ಲಿ ಕಾನೂನು ಕ್ರಮ" ಎಂದು ಕಳೆದ ನವೆಂಬರ್‌ನಲ್ಲಿ ಹೇಳಿದಿರಿ. ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳು ಕಬ್ಬು ಪೂರೈಸಿದ ರೈತರಿಗೆ 15 ದಿವಸಗಳಲ್ಲಿ ಬಿಲ್ ಅನ್ನು ಪಾವತಿ ಮಾಡಿದಿದ್ದರೆ, ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದಾಗಿ ಮಾನ್ಯ ಸಚಿವರಾದ ಮಹಾದೇವ್ ಅವರು ಎಚ್ಚರಿಕೆ ಕೊಟ್ಟರು. ಈಗ ಏನಾಗಿದೆ ಎಂದರೆ, ಸರ್ಕಾರ ಎಚ್ಚರಿಕೆ ಮಾಡುವಂಥದ್ದು, ಅಧಿಕಾರಿಗಳಿಗೆ ಎಚ್ಚರಿಕೆ ಕೊಡುವುದು, ಇವು ಜಾಸ್ತಿಯಾಗಿವೆ. ಇದು ಅದೇ ರೀತಿಯ ಎಚ್ಚರಿಕೆಯೋ ಅಥವಾ ಈಗಾಗಲೇ ನೀವು ಯಾವುದಾದರೂ ಫ್ಯಾಕ್ಟರಿಯ ಮೇಲೆ ಕ್ರಮ ಕೈಗೊಂಡಿದ್ದೀರೋ? ಏಕೆಂದರೆ, 335 ಕೋಟಿ ರೂಪಾಯಿ ಬಾಕಿ ಇದೆ, ಹೀಗಾಗಿ ಇದರ ಬಗ್ಗೆ ತಾವು ದಯವಿಟ್ಟು ಹೇಳಬೇಕು.

ಶ್ರೀ ಎಂ. ಮಹಾದೇವ್:- ಮಾನ್ಯ ಉಪಾಧ್ಯಕ್ಷರೆ, 50 ಕೋಟಿ ರೂಪಾಯಿ ಕಳೆದ ವರ್ಷದ ಬಾಕಿ, ಚಾಲ್ತಿ ವರ್ಷದಲ್ಲಿ 300 ಕೋಟಿ ರೂಪಾಯಿ ಇದೆ, ಚಾಲ್ತಿ ವರ್ಷದಲ್ಲಿ ಬರತಕ್ಕಂಥದ್ದು ಸಹಜ, ಅದನ್ನು ತಕ್ಷಣದಲ್ಲಿ ಫ್ಯಾಕ್ಟರಿಯವರು ಪಾವತಿಸಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ಕಾನೂನಿನ ಪ್ರಕಾರ ಫ್ಯಾಕ್ಟರಿಗೆ ಕಬ್ಬನ್ನು ಸರಬರಾಜು ಮಾಡಿ 15 ದಿವಸಗಳ ಒಳಗಡೆ ಬಾಕಿಯನ್ನು ಕೊಡಬೇಕಾಗುತ್ತದೆ. ಕೆಲವು ಫ್ಯಾಕ್ಟರಿಗಳು ಅನಿವಾರ್ಯ ಕಾರಣಗಳಿಂದಾಗಿ ಕೊಡಲಿಕ್ಕೆ ಆಗಿಲ್ಲ. ಅಂಥ ಫ್ಯಾಕ್ಟರಿಯ ಮೇಲೆ ನಾವು ನೋಟೀಸ್ ಕೊಟ್ಟಿದ್ದು, ಕ್ರಮವನ್ನು ಜರುಗಿಸಲಿಕ್ಕೆ ಮುಂದಾಗಿದ್ದೇವೆ, ಈಗಾಗಲೇ ಎರಡು ಪಾಕ್ಟರಿಗಳು ಯಮ್ಮಾವು ಎಂದರೆ, ಮಾಹದೇಶ್ವರ ಷುಗರ್ ಫ್ಯಾಕ್ಟರಿ ಮತ್ತು ಗೌರಿಬಿದನೂರು ಷುಗರ್ ಫ್ಯಾಕ್ಟರಿ ಇವುಗಳು ಬಾಕಿ ಕೊಟ್ಟಿರಲಿಲ್ಲ, ಇವುಗಳ ಮೇಲೆ ರೆವಿನ್ಯೂ ರಿಕವರಿ ಹಾಕಿ ಕ್ರಮ ತೆಗೆದುಕೊಂಡಿದ್ದೇವೆ. ಬಾಕಿ ಇರತಕ್ಕಂಥವುಗಳ ಮೇಲೆ ನಾವು ಕ್ರಮ ಜರುಗಿಸುವುದಕ್ಕೆ ಪ್ರಯತ್ನಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಬೆಳಗಾಂ ಜಿಲ್ಲೆ ಬಾಗ್ಮಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಮತ್ತು ರಾಯಭಾಗ ಸಕ್ಕರೆ ಫ್ಯಾಕ್ಟರಿ ಬಗ್ಗೆ, ಈ ಭಾಗ್ಮಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿಯೇ 14 ಕೋಟಿ ರೂಪಾಯಿಗಳನ್ನು ರೈತರಿಗೆ ಕೊಡುವುದು ಇದೊಂದರಿಂದಲೇ ಬಾಕಿ ಇದೆ. ಅದನ್ನು ಇದುವರೆಗೆ ಕೊಟ್ಟಿಲ್ಲ. ನೌಕರರಿಗೆ 6 ತಿಂಗಳಿನಿಂದ ಪಗಾರ ಇಲ್ಲ. ಪಿಎಫ್ ತುಂಬಿಲ್ಲ, ಇದು ಏತಕ್ಕೆ ಲಾಸ್ ಆಗಿದೆ ಎಂದರೆ, ಅವರ ಅವ್ಯವಹಾರದಿಂದ, ಇದು ಎಲ್ಲಿಯವರೆಗೆ ಅವ್ಯವಹಾರವಾಗಿದೆ ಎಂದರೆ, ಕಾಕಂಬಿ ಏನು ಪ್ರೊಡಕ್ಷನ್ ಆಗುತ್ತದೆ, ಒಂದು ಮೆಟ್ರಿಕ್ ಟನ್‌ಗೆ 700 ರೂಪಾಯಿಗಳಂತೆ ಕೊಡುತ್ತಿದ್ದಾರೆ. ಹೊರಗಡೆ 1400 ರೂಪಾಯಿ ರೇಟ್ ಇದೆ. ಅಂದರೆ ಅವ್ಯವಹಾರ ಯಾವ ರೀತಿ ಇದೆ ಎಂದು ತಾವು ತಿಳಿದುಕೊಳ್ಳಿ. ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುವುದಾದರೆ 60 ವ್ಯಾಟ್ಸ್ ಬಲ್ಬ್ ಖರೀದಿ ಮಾಡುವಾಗ 30 ರೂಪಾಯಿಗಳಂತೆ ಪ್ರತಿಯೊಂದು ಬಲ್ಬ್‌ಗೆ ರೇಟ್ ಹಾಕಿದ್ದಾರೆ. ಅದರ ರೇಟ್ ಮಾರ್ಕೆಟ್‌ನಲ್ಲಿ 8.50 ಪೈಸೆ ಇದೆ. ಇದು ಸರಿಯಿಲ್ಲವೆಂದು ಹೇಳಿ, ಷುಗರ್ ಕ್ವಾಲಿಟಿ ಸರಿಯಿಲ್ಲವೆಂದು ಹೇಳಿ, 80 ಸಾವಿರ ಚೀಲ ಬಹಳ ಅತಿ ಕಡಿಮೆ ರೇಟ್‌ನಲ್ಲಿ 760 ರೂಪಾಯಿಗಳಂತೆ ಕೊಟ್ಟಿದ್ದಾರೆ. ಇದರಲ್ಲಿ 4-5 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ, ಹೊರಗಡೆ ಇದರ ರೇಟ್ ಸಾವಿರ ರೂಪಾಯಿಗಳ ಮೇಲೆ ಇದೆ. ಇಲ್ಲಿ 712-00 ರೂಪಾಯಿಗಳಿಂದ 760 ರೂಪಾಯಿಗಳಂತೆ ಕೊಟ್ಟಿದ್ದಾರೆ. ಹೀಗಾಗಿ ಇದರಲ್ಲಿ ನಾಲ್ಕೈದು ಕೋಟಿ ಅವ್ಯವಹಾರವಾಗಿದೆ. ಇಂಥದ್ದರ ಬಗ್ಗೆ ನಾನು ಲಾಸ್ಟ್‌ಟೈಮ್ ಕೂಡ ಮೆನ್‌ಷನ್ ಮಾಡಿದ್ದೇನೆ. ಇದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ, ಅದನ್ನು ತಕ್ಷಣದಲ್ಲಿಯೇ ಕ್ರಮ ಕೈಗೊಳ್ಳಬೇಕಲ್ಲವೇ? ರೈತರಿಗೆ ಕೊಡಬೇಕಾದ ಬಾಕಿ 14 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲ. ಈ ಅವ್ಯವಹಾರದ ಬಗ್ಗೆ ಒಂದು ತಕ್ಷಣದಲ್ಲಿ ಎನ್‌ಕ್ವಾಯರಿಯನ್ನು ನೇಮಿಸದಿದ್ದರೆ ರೈತರಿಗೆ ನೀವು ಏನು ಉದ್ದಾರ ಮಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನೀವು ಏನು ಹೇಳುತ್ತೀರಿ?

ಶ್ರೀ ಎಂ. ಮಹದೇವ್:- ಆ ಫ್ಯಾಕ್ಟರಿಯಲ್ಲಿ ಏನು ಅವ್ಯವಹಾರ ನಡೆದಿದೆ, ಅದರ ಬಗ್ಗೆ ನೀವು ನಮಗೆ ಲಿಖಿತ ಮೂಲಕ ಕಳುಹಿಸಿಕೊಟ್ಟರೆ, ಸಮಗ್ರವಾದ ತನಿಖೆಯನ್ನು ಮಾಡಿ ಯಾರು ತಪ್ಪಿತಸ್ತರಿದ್ದಾರೆ ಅವರ ಮೇಲೆ ಕಠಿಣವಾದ ಕ್ರಮವನ್ನು ಕೈಗೊಳ್ಳುತ್ತೇವೆ, ಯಾರನ್ನು ನಾವು ವಹಿಸಿಕೊಂಡು ಮಾತನಾಡುವ ಪರಿಸ್ಥಿತಿ ಸರ್ಕಾರಕ್ಕೆ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಉಪಾಧ್ಯಕ್ಷರೆ, ಸಕ್ಕರೆ ಕಾರ್ಖಾನೆಗಳಿಗೆ ಹಣ ಬಿಡುಗಡೆಯಾಗುತ್ತಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿದೆ, ಇಡೀ ರಾಜ್ಯದಲ್ಲಿ ಈ ಕಾರಣಗಳಿಂದ ರೈತರು ಸಂಕಷ್ಟಕ್ಕೆ ಒಳಪಟ್ಟಿದ್ದಾರೆ. ಬರಗಾಲ ಒಂದು ಕಡೆಗೆ, ಬೆಳೆದಂಥ ಬೆಳೆಗೆ ಬೆಲೆ ಇಲ್ಲದಿರುವಂಥದ್ದು ಒಂದು ಕಡೆಗೆ, ಕೊಡುವಂಥ ಹಣವನ್ನು ಸಕ್ಕರೆ ಕಾರ್ಖಾನೆಗಳವರು ಕೊಡದಿರುವುದರಿಂದ ರೈತರು ಮತ್ತಷ್ಟು ಸಂಕಷ್ಟಕ್ಕೆ ಈಡಾಗಿರುವ ಪರಿಸ್ಥಿತಿ ಇದೆ, ಸರ್ಕಾರ ತಕ್ಷಣ ಹಣ ಬಿಡುಗಡೆಗೆ ಸೂಕ್ತವಾದ ಆದೇಶವನ್ನು ಕೊಡಬೇಕೆಂದು ಮತ್ತೊಮ್ಮೆ ಆಗ್ರಹಿಸುತ್ತೇನೆ. ಶ್ರೀ ಭಾಗ್ಮಲಕ್ಷ್ಮಿ ಸಕ್ಕರೆ ಕಾರ್ಖಾನೆಯ ವಿಷಯವಾಗಿ ಮಾನ್ಯ ನಮ್ಮ ನಾಯಕರಾದ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿದರು ಏನು ಆಗಿದೆಯೆಂದು, ಇದರ ಬಗ್ಗೆ ಒಂದು ಉದಾಹರಣೆಯನ್ನು ನಾನು ಕೊಡುತ್ತೇನೆ. ಕಾರ್ಖಾನೆಗೆ ಚುನಾವಣೆ ನಡೆಸಲಿಕ್ಕೆ 1 ಕೋಟಿ 27 ಲಕ್ಷ ರೂಪಾಯಿಗಳನ್ನು ಖರ್ಚು ಹಾಕಿದ್ದಾರೆ. ಐಡೆಂಟಿಟಿ ಕಾರ್ಡ್‌ಗಳನ್ನು ಅಲ್ಲಿ ಕೊಡುವುದಕ್ಕೆ 35 ಲಕ್ಷ ರೂಪಾಯಿಗಳನ್ನು

ಖರ್ಚು ಹಾಕಿದ್ದಾರೆ. ಇದರ ಜೊತೆಗೆ 80 ಸಾವಿರ ಟೀಲ ಸಕ್ಕರೆ ಡ್ಯಾಮೇಜ್ ಆಗಿದೆ ಎಂದು ಸಕ್ಕರೆಯನ್ನು ಅತೀ ಕಡಿಮೆ ದರದಲ್ಲಿ ಕೊಟ್ಟಿದ್ದಾರೆ. ಅಂದರೆ ಭಾಗ್ಯಲಕ್ಷ್ಮಿ ಷುಗರ್ ಫ್ಯಾಕ್ಟರಿ ಬಗ್ಗೆ ಸರ್ಕಾರ ಯಾವುದೋ ಒಂದು ರೀತಿಯಲ್ಲಿ ಷ್ಯಾಮೀಲಾಗಿದ್ದಾರೆ ಎನ್ನುವುದರ ಬಗ್ಗೆ ಜನರು ಮಾತನಾಡುತ್ತಿದ್ದಾರೆ. ಏಕೆಂದರೆ, ಇದರ ಬಗ್ಗೆ ಒಂದು ನಿಷ್ಪಕ್ಷಪಾತವಾದಂಥ ಒಂದು ತನಿಖೆಯಾಗಬೇಕು. ಮಾನ್ಯ ಉಪಾಧ್ಯಕ್ಷರೆ, ನೀವು ನಮ್ಮ ಪಕ್ಕದ ಸೀಟಿನಲ್ಲಿ ಇರುವವರು ನಮಗೆ ಮಾತನಾಡಲು ನೀವು ಹೆಚ್ಚಿಗೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ನಿಷ್ಪಕ್ಷಪಾತವಾದ ತನಿಖೆಯಾಗಬೇಕು, ಮಾನ್ಯ ಸಚಿವರು ತನಿಖೆಯ ಬಗ್ಗೆ ಏನು ಹೇಳುತ್ತಾರೆ?

ಶ್ರೀ ಎಂ. ಮಹದೇವ್:- ಮಾನ್ಯ ಉಪಾಧ್ಯಕ್ಷರೆ, ಸೆಕ್ಷನ್ 64 ಕೋ-ಆಪರೇಟಿವ್ ಆಕ್ಟ್ ಪ್ರಕಾರ, ಅದನ್ನು ಜಾಯಿಂಟ್ ರಿಜಿಸ್ಟ್ರಾರ್ ಎನ್‌ಕ್ವಾಯರಿ ಮಾಡಲಿಕ್ಕೆ ಆದೇಶ ಮಾಡಿದ್ದೇವೆ. ಇದನ್ನು ಮಾಡಿ 6 ತಿಂಗಳಾಯಿತು, ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನೊಂದು ಹೇಳಿದರು ಅದು ಮಿಸ್‌ಮ್ಯಾನೇಜ್‌ಮೆಂಟ್‌ಗೆ ಸಂಬಂಧಪಟ್ಟಂತೆ. ಬೇರೆ ಇನ್ನೇನಾದರೂ ಅವ್ಯವಹಾರವಾಗಿದ್ದರೆ ತಕ್ಷಣದಲ್ಲಿಯೇ ಅದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ನಾನು ಎಲ್ಲಾ ಡಿಟೇಲ್ಸ್‌ನ್ನು ಕೊಟ್ಟು ಕಳುಹಿಸುತ್ತೇನೆ. ತಕ್ಷಣ ಎನ್‌ಕ್ವೈಯರಿ ಮಾಡಬೇಕು. ಇನ್ನೊಂದು ವಿಷಯವನ್ನು ಇಲ್ಲಿ ಹೇಳುತ್ತೇನೆ. ನೀವು ಹೊಸದಾಗಿ ಲೈಸೆನ್ಸ್‌ನ್ನು ಕೊಡುತ್ತಿಲ್ಲ. ಷುಗರ್ ಪ್ರೊಡಕ್ಷನ್ ಜಾಸ್ತಿಯಾಗಿದೆ ಸಕ್ಕರೆ ಸ್ಟಾಕ್ ಇದೆ ಎಂದು ಕೊಡುತ್ತಿಲ್ಲ. ಆದರೆ ನೀವು ಕೋ-ಜನರೇಶನ್‌ಗೆ ಅವಕಾಶವನ್ನು ಮಾಡಿಕೊಡಿ. ಎಥಿನಾಲ್ ಪ್ರೊಡಕ್ಷನ್ ಸಲುವಾಗಿ ನೀವು ಅವಕಾಶವನ್ನು ಮಾಡಿಕೊಡಿ, ಪೆಟ್ರೋಲ್‌ಗೆ ಅದನ್ನು ಮಿಕ್ಸ್ ಮಾಡಿದರೆ ಕಂಜಮ್‌ಷನ್‌ಗೆ ಅನುಕೂಲವಾಗುತ್ತದೆ. ಪರಿಸರವನ್ನು ಕೂಡ ಒಂದು ರೀತಿಯಲ್ಲಿ ಕಾಯ್ದುಕೊಂಡು ಹೋಗುವುದಕ್ಕಾಗುತ್ತದೆ. ಎಥಿನಾಲ್ ಪ್ರೋಡಕ್ಷನ್‌ಗೆ ನೀವು ಅವಕಾಶವನ್ನು ಮಾಡಿಕೊಡಿ, ಕೋ-ಜನರೇಶನ್ ಮಾಡಿದರೆ ವಿದ್ಯುತ್‌ನ ಸಮಸ್ಯೆ ಆ ಭಾಗಕ್ಕೆ ತಪ್ಪಿ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಈ ಎರಡನ್ನು ಮಾಡುವುದಕ್ಕೆ ಅವಕಾಶವಿದೆ, ದಯವಿಟ್ಟು ಅದನ್ನು ಮಾಡಿ, ಯಾರ್ಯಾರು ಅಪ್ಲೀಕೇಶನ್ ಕೊಟ್ಟಿದ್ದಾರೆ ಅವರಿಗೆ ಅವಕಾಶವನ್ನು ಮಾಡಿಕೊಡಿ, ಡಿಲೇ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಹದೇವ್:- ಮಾನ್ಯ ಉಪಾಧ್ಯಕ್ಷರೆ, ಯಾವ್ಯಾವುದು ಸಿಂಗಲ್ ವಿಂಡೊ ಏಜೆನ್ಸಿ ಕ್ಲಿಯರ್ ಆಗಿದೆ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಅಕಾಮಡೇಟ್ ಮಾಡುತ್ತಿದ್ದೇವೆ. ಸಕ್ಕರೆ ಕಾರ್ಖಾನೆಗಳನ್ನು ಕೋ-ಜನರೇಷನ್ ಮಾಡುವುದಕ್ಕೆ ಹಾಗೂ ಎಥಿನಾಲ್ ಇನ್ಫ್ಯುಡ್ಯುಸ್ ಮಾಡುವುದಕ್ಕೆ ಮತ್ತು ಯಾವ್ಯಾವ ಫ್ಯಾಕ್ಟರಿಗಳು ಸಂಕಷ್ಟದಲ್ಲಿವೆ ಸಹಾಯ ಮಾಡುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೇವೆ. ಅದರಲ್ಲಿ ಕೆಲವು ಪಾಯಿಂಟ್ಸ್‌ಗಳು ಇವೆ, ಅವರು ಏನಾದರೂ ಇಷ್ಟಪಟ್ಟರೆ ನಾನು ಹೇಳುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ನೀವು ಎಷ್ಟು ಫ್ಯಾಕ್ಟರಿಗಳ ಮೇಲೆ ಕ್ರಮವನ್ನು ಕೈಗೊಂಡಿರುತ್ತೀರಿ. ನೀವು ಒಂದು ಸ್ಟೇಟ್‌ಮೆಂಟ್‌ನ್ನು ನವೆಂಬರ್ ತಿಂಗಳಲ್ಲಿ ಕೊಟ್ಟಿದ್ದೀರಿ.

ಶ್ರೀ ಎಂ. ಮಹದೇವ್:- ಎರಡು ಷುಗರ್ ಫ್ಯಾಕ್ಟರಿಗಳ ಮೇಲೆ ನಾವು ಕ್ರಮ ಕೈಗೊಂಡಿದ್ದೇವೆ. ಅದನ್ನು ರೆವಿನ್ಯೂ ರಿಕವರಿಗೆ ಹಾಕಿದ್ದೇವೆ. ರೆವಿನ್ಯೂ ರಿಕವರಿ ಆಗಿಬಿಟ್ಟರೆ ಮತ್ತೆ ಅವು ಸರ್‌ವೈವ್ ಆಗುವ ಪ್ರಶ್ನೆಯೇ ಇಲ್ಲ. ಎಲ್ಲವನ್ನೂ ಸೆಟ್ಲ್ ಮಾಡಿದ್ದೇವೆ ಸೆಕ್ಷನ್ 64ರ ಎನ್‌ಕ್ವಯರಿ ವರದಿ ಬಂದ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ನೀವು ಹೇಳುವುದು ಭಾಗ್ಯಲಕ್ಷ್ಮಿ ಷುಗರ್ ಫ್ಯಾಕ್ಟರಿಯದ್ದಾಯಿತು. ಇಡೀ ರಾಜ್ಯದಲ್ಲಿ 335 ಕೋಟಿ ರೂಪಾಯಿಗಳ ಕೊಡುವುದು ಬಾಕಿ ಇದೆ, ಅದನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ?

ಶ್ರೀ ಎಂ. ಮಹದೇವ್:- ರೈತರಿಗೆ ಕೊಡಬೇಕಾದ ಬಾಕಿ ಹಣದಲ್ಲಿ ನಾವು ಕಾಂಪ್ರಮೈಸ್ ಆಗುವುದಿಲ್ಲ, ರೈತನಿಗೆ ಎಷ್ಟು ಹಣ ನಿಯಮದ ಪ್ರಕಾರ ಬರಬೇಕು, ಅದನ್ನು ಕೊಡಿಸಿಯೇ ಕೊಡಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಒಂದು ಟೈಮ್ ಬಾಂಡ್ ಫಿಕ್ಸ್ ಮಾಡಿ, ಇನ್ನು 15 ದಿವಸಗಳಲ್ಲಿ ಬಾಕಿ ಹಣ ಕೊಡಲಾಗುವುದೆಂದು ನವೆಂಬರ್ ತಿಂಗಳಲ್ಲಿಯೇ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೀರಿ.

ಶ್ರೀ ಮಹದೇವ್:- ಅದಷ್ಟು ಜಾಗ್ರತೆಯಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇನೆ.

ಸರ್ಕಾರಿ ರೇಷ್ಮೆ ಕಾರ್ಖಾನೆಗಳ ವಿಲೀನ

204 (2066) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೇಷ್ಮೆ ಕಾರ್ಖಾನೆಗಳಲ್ಲಿ ಕೇವಲ 20 ರಿಂದ 25 ಬೇಸಿನ್‌ಗಳು ನಡೆಯುತ್ತಿದ್ದು, ಕಾರ್ಖಾನೆಗಳಲ್ಲಿ ಆಡಳಿತ ಹಾಗೂ ತಾಂತ್ರಿಕ ವರ್ಗದ ನೌಕರರು ಹೆಚ್ಚು ಇದ್ದು ಕಾರ್ಮಿಕರು ಕಡಿಮೆ ಇರುವುದರಿಂದ ಆಡಳಿತದಲ್ಲಿ ಹೆಚ್ಚು ಹೊರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?

ಇ) ಹಾಗಿದ್ದಲ್ಲಿ ಈ ಎಲ್ಲಾ ಕಾರ್ಖಾನೆಗಳಲ್ಲಿ ಆಗುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಐದು ಕಾರ್ಖಾನೆಗಳನ್ನು ಎರಡನ್ನಾಗಿ ವಿಲೀನಗೊಳಿಸಿ ಕಾರ್ಮಿಕ ನೌಕರರುಗಳಿಗೆ ಪೂರ್ಣ ಪ್ರಮಾಣದ ಕೆಲಸ ವಹಿಸಿ ಆಗುತ್ತಿರುವ ನಷ್ಟವನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಬಂದಿದೆ

ಆ) ಬಂದಿದೆ

ಇ) ಸರ್ಕಾರಕ್ಕೆ ಹೆಚ್ಚಿನ ಹೊರೆಯಿಲ್ಲದೆ 5 ಫಿಲೇಚರ್ ಘಟಕಗಳನ್ನು 2 ಘಟಕಗಳಿಗೆ ಒಗ್ಗೂಡಿಸಿ ಅಭಿವೃದ್ಧಿ ಸಾಧ್ಯವೆ ಎಂಬ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಎ.ಎಸ್. ಗುರುಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ರೇಷ್ಮೆ ಇಲಾಖೆಯ ಬಗ್ಗೆ ಕಳೆದ ಸಲ ಮಂತ್ರಿಯಾಗಿದ್ದವರು ಏನು ಉತ್ತರವನ್ನು ಕೊಟ್ಟಿದ್ದಾರೋ ಅದೇ ಉತ್ತರವನ್ನು ಇವರು ಈ